# ಆಪದ್ಬಾಂಧು

## ಶ್ರೀಮತಿ ಮಂಗಳಮ್ಮ

**ಭಾ**ರತವು ಸ್ವಾತಂತ್ರ್ಯ ಪಡೆಯುವುದಕ್ಕೆ ಮುಂಚೆ ಕರಾಚಿಯಲ್ಲಿ ನಡೆದ ಒಂದು ಘಟನೆ. ಅಲ್ಲಿದ್ದ ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳೊಬ್ಬರಿಂದ ಕೇಳಿದ್ದು.

ಕರಾಚಿಯ ಅರಣ್ಯ ಇಲಾಖೆಗೆ ಒಬ್ಬ ಅಧಿಕಾರಿಗಳು ವರ್ಗವಾಗಿ ಬಂದರು. ಆಗ ದೇಶ ವಿಭಜನೆಯ ಸಮಯ. ಎಲ್ಲೆಲ್ಲಿಯೂ ಕೋಮುಗಲಭೆ. ಕೆಲಸ ಕಾರ್ಯಗಳಿಗಾಗಿ ಹೊರಗಡೆ ಹೋದವರು ಹಿಂತಿರುಗಿ ಮನೆಗೆ ಬರುವವರೆಗೂ ಆತಂಕ, ಕಳವಳ. ಸಂಜೆ ವೇಳೆ ಇನ್ನೂ ಬೆಳಕಿರುವಾಗಲೇ ಹಿಂತಿರುಗುತ್ತಿದ್ದರು. ಒಂದು ದಿನ ಆ ಅಧಿಕಾರಿ ಬೆಳಿಗ್ಗೆ ಬೇಗನೇ ಮನೆ ಬಿಟ್ಟು ಹೋದವರು, ಸಾಮಾನ್ಯವಾಗಿ ನಿತ್ಯ ಬರುವ ವೇಳೆ ಮೀರಿದರೂ ಮನೆಗೆ ಬರಲಿಲ್ಲ. ಅವರ ಹೆಂಡತಿಗೆ ಚಿಂತೆ ಪ್ರಾರಂಭ. ಆಕೆ ಮನೆಯಿಂದ ಬೀದಿವರೆಗೆ ಎಡತಾಗತೊಡಗಿದಳು. ಇರುಳು ಉರುಳುತ್ತಲೇ ಇತ್ತು. ಕತ್ತಲಾವರಿಸಿತು. ಬೀದಿಯ ಬಾಗಿಲ ಬಳಿ ನಿಂತು ಕಾಯೋಣವೆಂದರೆ ಪುಂಡರ ಕಾಟ ಬೇರೆ. ಮನಸ್ಸಿನಲ್ಲಿ ದುಗುಡ ಹೆಚ್ಚಿತು. ದೇವರ ಸ್ಮರಣೆ ಮಾಡುತ್ತಾ ಶತಪಥ ಹಾಕತೊಡಗಿದಳು. ಬೀದಿಯಲ್ಲಿ ಸ್ವಲ್ಪ ಶಬ್ದವಾದರೂ ಗಂಡ ಬರುವ ಗಾಡಿ ಎಂದುಕೊಂಡು ಓಡುವಳು. ಹೀಗೆ ಕಾಯುತ್ತ ಬಾಗಿಲಲ್ಲಿ ನಿಂತಾಗ ಒಬ್ಬ ಮಹಿಳೆ "ಯಾಕಮ್ಮಾ ಚಿಂತಿಸುತ್ತಿ? ಇನ್ನು ಸ್ವಲ್ಪ ಹೊತ್ತಿನಲ್ಲಿ ನಿನ್ನ ಗಂಡ ಸುರಕ್ಷಿತವಾಗಿ ಮನೆಗೆ ಬರುತ್ತಾನೆ. ಒಳಗೆ ಹೋಗು," ಎಂದು ಹೇಳಿದಳು. ಮಬ್ಬು ಗತ್ತಲಲ್ಲಿ ಅವಳ ಮುಖ ಸ್ಪಷ್ಟವಾಗಿ ಕಂಡಿತು. ಈಕೆ ತನ್ನ ಚಿಂತೆ ಯಲ್ಲಿ ಮುಳುಗಿದ್ದಳು. ಆಕೆ ಹೇಳಿದ ಮಾತುಗಳು ಏನೋ ಒಂದು ತರಹ ಸಮಾಧಾನವನ್ನಿತ್ತಿತು –"ಮುಳುಗುತ್ತಿರುವವನಿಗೆ ಹುಲ್ಲು ಕಡ್ಡಿಯೇ ಆಧಾರ"ದಂತೆ. ಈಕೆ ಮನೆಗೆ ಹಿಂತಿರುಗಿದಳು.

ಮನೆ ಒಳಗೆ ಬರುತ್ತಲೇ ಯೋಚನಾಲಹರಿಯೊಂದು ಹೊಳೆಯಿತು. "ಆಕೆ ಯಾರು? ಒಂಟಿ ಹೆಂಗಸು, ಆಕೆ ಹೇಗೆ ಕತ್ತಲಲ್ಲಿ ಬಂದಳು? ನನ್ನ ಭ್ರಾಂತಿಯೇ? ಇಲ್ಲ, ಅವಳ ಶಾಂತಮುಖ ಮನಸ್ಸಿನಲ್ಲಿ ಅಚ್ಚೊತ್ತಿದೆ. ಪಾಪ, ಒಂಟಿ ಹೆಂಗಸನ್ನು ನಾನೇಕೆ ಒಳಗೆ ಕರೆಯಲಿಲ್ಲ." ಮನಸ್ಸು ಪಶ್ಚಾತ್ತಾಪಗೊಂಡಿತು. ಅಥವಾ ಅವಳೂ ಮೋಸಗಾತಿಯೋ? ಪುಂಡರ ಕಡೆಯವಳೊ? ಹಲವು ಭಾವನೆಗಳ ಗೋಜಲಾಯಿತು ಮನಸ್ಸು. "ಏನಾದರಾಗಲಿ ಅವಳಿನ್ನೂ ಬಹಳ ದೂರ ಹೋಗಿರಲಿಕ್ಕಿಲ್ಲ. ಮನೆಗೆ ಕರೆತರುತ್ತೇನೆ. ಬೆಳಿಗ್ಗೆ ಕಳಿಸಿದರಾಯಿತು" ಎಂದುಕೊಂಡು ಬೀದಿಬಾಗಿಲಿಗೆ ಬಂದಳು. ಆ ವೇಳೆಗೆ ಸರಿಯಾಗಿ ಗಾಡಿಯಿಂದ ಗಂಡ ಕೆಳಕ್ಕೆ ಇಳಿಯುತ್ತಿದ್ದರು. "ಏಕೆ ಕತ್ತಲಲ್ಲಿ ಇಲ್ಲಿ ಒಬ್ಬಳೇ ನಿಂತಿದ್ದೀ? ಇಲ್ಲಿನ ಗಲಾಟೆ ಗೊತ್ತಿಲ್ಲವೆ?" ಎಂದಾಗ ಬಂದಿದ್ದ ಮಹಿಳೆಯ ವಿಷಯವನ್ನು ತಿಳಿಸಿದಳು. ಆತನೂ ಸಹ ಸುತ್ತಮುತ್ತ ಕಣ್ಣಾಡಿಸಿ, ಸ್ವಲ್ಪದೂರ ಹೋಗಿ ಬಂದನು. ಆ ಕತ್ತಲಲ್ಲಿ ಗಂಡಸರೂ ಹೊರಗಡೆ ಅಡ್ಡಾಡುವುದು ಅಪಾಯವಾಗಿತ್ತು. ಸಮಾಧಾನದಿಂದ ಹೇಳಿದನು: "ಈ ಕತ್ತಲೆಯಲ್ಲಿ ಎಲ್ಲಿ ಅಂತ ಹುಡುಕುವುದು? ಆಕೆಗೆ ಇಲ್ಲಿನ ಪರಿಸರದ ಪರಿಚಯವಿರಬಹುದು. ಬೆಳಗಿನ ವೇಳೆ ಆಕೆಯನ್ನು ಕಂಡರೆ ಕರೆತಂದು ಧನ್ಯವಾದಗಳನ್ನು ತಿಳಿಸೋಣ. ನೀನು ಆಕೆಯನ್ನು ಗುರುತಿಸಬಲ್ಲೆಯಾ?" ಎಂದಾಗ, ಪತ್ನಿ ಹೇಳಿದಳು : "ಒಂದೇ ಕ್ಷಣವಾದರೂ ನಾನು ಮುಖವನ್ನು ಚೆನ್ನಾಗಿ ನೋಡಿದ್ದೇನೆ. ಶಾಂತ, ಸುಂದರ, ಮಂದಸ್ಮಿತ, ಅವಳ ಮಾತು ಎಂಥ ಸಮಾಧಾನ ನೀಡಿತು! ಅದನ್ನು ಜೀವಮಾನವಿಡೀ ಮರೆಯಲಾರೆ." ಅಂದಿನಿಂದ ಆಕೆಯನ್ನು ಹುಡುಕುವ, ಕಾಣುವ ಕಾತರ. ಹೀಗೆ ಕೆಲದಿನಗಳೇ ಕಳೆದುಹೋದವು.

ಒಂದು ದಿನ ಸಂಜೆ ಗಂಡ ಹೆಂಡತಿಯರು ಪೇಟೆ ಕಡೆಗೆ ಕೋಚ್ ಗಾಡಿಯಲ್ಲಿ ಹೊರಟರು. ಪತ್ನಿ ಅಕ್ಕ ಪಕ್ಕ ನೋಡುತ್ತ ಇದ್ದಳು. "ಆ ಮಹಿಳೆ" ಸಿಗಬಹುದೇನೋ ಎನ್ನುವ ಒಂದು ಆಶಾಕಿರಣ ಆಕೆಯ ಮನದಲ್ಲಿದ್ದಿತು. ದಾರಿಯಲ್ಲಿ ಒಂದು ಕಟ್ಟಡದಿಂದ ಭಜನೆ ಕೇಳಿ ಬರುತ್ತಿತ್ತು. ಅದನ್ನು ಕೇಳೋಣವೆಂದು ಒಳಗೆ ಹೋದರು. ಅದು ಮಂದಿರ. ಸಂಧ್ಯಾರತಿ ನಡೆಯುತ್ತಿತ್ತು. ಹೆಚ್ಚು ಜನರಿರಲಿಲ್ಲ. ಇವರೂ ಕುಳಿತು, ಆರತಿ ನೋಡಿ, ಪ್ರಸಾದ ಸ್ವೀಕರಿಸಿದರು. ಭಕ್ತಾದಿಗಳು ಒಬ್ಬೊಬ್ಬರೇ ಹೊರಟರು. ಕೆಲವು ಸಾಧುಗಳೂ ಬ್ರಹ್ಮಚಾರಿಗಳೂ ಉಳಿದರು. ಈ ದಂಪತಿಗಳು ಹತ್ತಿರ ಹೋಗಿ ದೇವರಿಗೆ ನಮಸ್ಕರಿಸೋಣವೆಂದು ಮುನ್ನಡೆದರು. ಪತ್ನಿ ಅಕ್ಕ ಪಕ್ಕ ನೋಡುತ್ತಿದ್ದವಳು ಇದ್ದಕ್ಕಿದ್ದಂತೆ "ಅಗೋ, ಅಲ್ಲಿ ನೋಡಿ, ಆಕೆಯೇ ಆ ದಿನ ಕತ್ತಲಲ್ಲಿ ನನಗೆ ಧೈರ್ಯ ಹೇಳಿ ಹೋದವರು" ಎಂದು ಜೋರಾಗಿ ಹೇಳಿದಳು. ಗಂಡನಿಗೆ ಆಕೆ ತೋರಿಸಿದ ಭಾವಚಿತ್ರವನ್ನು ನೋಡಿ, ಇದು ಹೇಗೆ ಸಾಧ್ಯ? ಎಂದು ಆಶ್ಚರ್ಯವಾಯಿತು. ತಕ್ಷಣ ಹೆಂಡತಿಯನ್ನು "ಇದು ಮಂದಿರ, ಜೋರಾಗಿ ಏಕೆ ಕೂಗುತ್ತಿ? ಆಕೆ ಇಲ್ಲಿ, ಹೀಗೆ ಏಕೆ ಇರುತ್ತಾಳೆ?" ಎಂದು ಗದರಿಕೆಯ ಧ್ವನಿಯಲ್ಲಿ ಹೇಳಿದನು.

ಅಷ್ಟು ಹೊತ್ತಿಗೆ ಅಲ್ಲಿದ್ದ ಸ್ವಾಮಿಗಳೊಬ್ಬರು ಆತನನ್ನು ತಡೆಯುತ್ತಾ, "ತಾಯಿ, ಏನಮ್ಮಾ ಸಮಾಚಾರ? ಯಾವಾಗ ನಿನಗೆ ಧೈರ್ಯ ಹೇಳಿದರು?" ಎಂದಾಗ, ಈಕೆ ಆ ಕತ್ತಲಲ್ಲಿ ನಡೆದ ವಿಚಾರವನ್ನೆಲ್ಲ ತಿಳಿಸಿದಳು. ಸ್ವಾಮಿಗಳು : "ತಾಯಿ, ನೀನೇ ಧನ್ಯೆ. ನಿನಗೆ ಅಭಯವಿತ್ತ ಆಪದ್ಬಾಂಧು ಶ್ರೀಮಾತೆಯ ದರ್ಶನ ಪಡೆದಿದ್ದೀಯೆ!" ಸ್ವಾಮಿಗಳು ಗುರುದೇವ ಶ್ರೀರಾಮಕೃಷ್ಣರ, ಶ್ರೀಮಾತೆಯವರ ಹಾಗೂ ಸ್ವಾಮಿ ವಿವೇಕಾನಂದರ ಸಂಕ್ಷಿಪ್ತ ವಿವರಣೆಯನ್ನಿತ್ತರು. ಅಂದಿನಿಂದ ಅವರು ಗುರುದೇವರ, ಶ್ರೀಮಾತೆಯ ಆರಾಧಕರಾಗಿ ಜೀವನ ಸಾರ್ಥಕ ಪಡೆದರು.

**ಶ್ರೀಮಾತೆಯವರು ಎಷ್ಟು ಜನಗಳ "ಆಪದ್ಬಾಂಧು" ಗಳಾಗಿರುವರೆಂಬುದನ್ನು ಊಹಿಸಲು ಸಾಧ್ಯವೇ?**